ನಿ-72
ಕ್ರ-52

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ, ಇವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರ ಹೇಳಿಕೆ**

**ಸೂಚನೆ**

ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಕಾಲೇಜು ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿನ ಸರ್ಕಾರಿ ಪದವಿ ಕಾಲೇಜು, ಸರ್ಕಾರಿ ಇಂಜಿನಿಯರಿಂಗ್ ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ಸಿ.ಎ.ಎಸ್ ಅಡಿಯಲ್ಲಿ ನಿಯಮಾವಳಿ ಪ್ರಕಾರ ವೃತ್ತಿ ಪದೋನ್ನತಿ ನೀಡದೆ ಇರುವುದರಿಂದ ಅಧ್ಯಾಪಕರ ಮನೋಸ್ಥೈರ್ಯ ಕುಸಿದಿರುವುದರಿಂದ ಗುಣಮಟ್ಟದ ಶಿಕ್ಷಣಕ್ಕೆ ಅಡ್ಡಿ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

**ಹೇಳಿಕೆ**

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗೆ ಯುಜಿಸಿ ಮಾರ್ಗಸೂಚಿಗಳನ್ವಯ ನಿಯಮಾನುಸಾರ ಅರ್ಹರಿರುವ ಪ್ರಕರಣಗಳಲ್ಲಿ ಕಾಲ ಕಾಲಕ್ಕೆ ನಿಯಮಿತವಾಗಿ ವೃತ್ತಿ ಪದೋನ್ನತಿಯನ್ನು ಮಂಜೂರು ಮಾಡಲಾಗುತ್ತಿದೆ. 2020-21ನೇ ಸಾಲಿನಿಂದ ಪ್ರಸ್ತುತ ದಿನಾಂಕದವರೆವಿಗೂ ಶೈಕ್ಷಣಿಕ ಹಂತ 10 ರಿಂದ 11, 11 ರಿಂದ 12, 12 ರಿಂದ 13ಎ ಮತ್ತು 13ಎ ರಿಂದ 14ರವರೆಗೆ ಆಯುಕ್ತಾಲಯದ ವಿವಿಧ ದಿನಾಂಕಗಳ ಆದೇಶಗಳಲ್ಲಿ ಒಟ್ಟು 3,840 ಸಹಾಯಕ/ಸಹ ಪ್ರಾಧ್ಯಾಪಕರುಗಳಿಗೆ ಪದೋನ್ನತಿ ನೀಡಲಾಗಿರುತ್ತದೆ. ಮುಂದುವರೆದು, ಸಹ ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕ ಹುದ್ದೆಯ ಪದೋನ್ನತಿಗೆ ಆಯುಕ್ತಾಲಯದಿಂದ ಆದೇಶಗಳನ್ನು ದಿನಾಂಕ:14.12.2022 ರಂದು ಹೊರಡಿಸಲಾಗಿರುತ್ತದೆ.

ಬೋಧಕರ ಪದೋನ್ನತಿ ನೀಡುವಿಕೆಯು ನಿರಂತರ ಪ್ರಕ್ರಿಯೆಯಾಗಿದ್ದು, ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಸಂದರ್ಶನ ಏರ್ಪಡಿಸಿ ಪದೋನ್ನತಿ ನೀಡಲಾಗುತ್ತಿದೆ.

ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜು ಹಾಗೂ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವರ್ಗದವರಿಗೆ ಎಐಸಿಟಿಇ ಅಧಿಸೂಚನೆ ಸಂ: FNo:37-3/LEGAL/2010 ದಿನಾಂಕ: 05.03.2010 ರಲ್ಲಿ ನೇಮಕಾತಿ ಹಾಗೂ ಎ.ಜಿ.ಪಿ ಮಂಜೂರಾತಿ ನೀಡುವ ಕುರಿತು ಸಿ.ಎ.ಎಸ್ ನಿಯಮಾವಳಿಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಮಾರ್ಗಸೂಚಿಯನ್ನು ನೀಡಲಾಗಿದೆ.

ಎಐಸಿಟಿಇ ಅಧಿಸೂಚನೆ ಸಂ: FNo:37-3/LEGAL/2012, ದಿನಾಂಕ:08.11.2012ರಲ್ಲಿ 2010 ರ ನಿಯಮಾವಳಿಗಳನ್ನು ಮೇಲ್ದರ್ಜೆಗೇರಿಸಿ ಹಲವು ನಿಯಮಗಳಲ್ಲಿ ಹಾಗೂ ವೃತ್ತಿ ಪದೋನ್ನತಿ ನಿಯಮಾವಳಿಗಳಲ್ಲಿ ಎಲ್ಲಾ ವೃಂದದ ಬೋಧಕ ವರ್ಗದವರಿಗೂ ಸೇರಿ ಮಾರ್ಗಸೂಚಿಯನ್ನು ಪ್ರಚುರಪಡಿಸಲಾಗಿದೆ. ಈ ನಿಯಮಗಳನ್ನು ಅಳವಡಿಸಿಕೊಳ್ಳುವ ಸಂದರ್ಭದಲ್ಲಿ ಉದ್ಭವಗೊಂಡ ಸಮಸ್ಯೆಗಳಿಗೆ ಎಐಸಿಟಿಇ ಸ್ಪಷ್ಟೀಕರಣ ಕೋರಲಾಗಿತ್ತು. ಅದರಂತೆ, ಸರ್ಕಾರಿ / ಅನುದಾನಿತ ಇಂಜಿನಿಯರಿಂಗ್ ಕಾಲೇಜು ಹಾಗೂ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ವರ್ಗದವರಿಗೆ 6ನೇ ಎಐಸಿಟಿಇ ವೇತನ ಶ್ರೇಣಿಯನ್ನು ವಿಸ್ತರಿಸಲಾಗಿದೆ ಹಾಗೂ ಎಐಸಿಟಿಇ ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆ / ನಿಯಮಾವಳಿ/ ಸ್ಪಷ್ಟೀಕರಣಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.

ಎ.ಜಿ.ಪಿ ಮಂಜೂರಾತಿ ಹಾಗೂ ಸಿ.ಎ.ಎಸ್ ನಿಯಮಾವಳಿ ಕುರಿತಾದ 2010 ಮತ್ತು 2012ರ ಎಐಸಿಟಿಇ ಅಧಿಸೂಚನೆಗೆ ಎಐಸಿಟಿಇಯು ಅಧಿಸೂಚನೆ ದಿನಾಂಕ:04/01/2016ರಲ್ಲಿ ಸ್ಪಷ್ಟೀಕರಣಗಳನ್ನು ಪ್ರಚುರಪಡಿಸಿದ್ದು, ಅದರನ್ವಯ ಬೋಧಕ ವರ್ಗದವರಿಗೆ ವೃತ್ತಿ ಪದೋನ್ನತಿ ನಿಯಮಾವಳಿಗಳನ್ನು ಪೂರ್ವಾನ್ವಯವಾಗಿ ಅಳವಡಿಸಿಕೊಂಡ ಸಂದರ್ಭದಲ್ಲಿ ಕೆಲವೊಂದು ಸಮಸ್ಯೆಗಳು ಉದ್ಭವಗೊಂಡಿದ್ದು, ಈ ಬಗ್ಗೆ ಎ.ಐ.ಸಿ.ಟಿ.ಇ ಯೊಂದಿಗೆ ಪತ್ರ ವ್ಯವಹಾರ ನಡೆಸಿ, ಸ್ಪಷ್ಟೀಕರಣ ಪಡೆದ ನಂತರ ಸಿ.ಎ.ಎಸ್ ನೀಡುವ ಬಗ್ಗೆ ಕ್ರಮವಹಿಸಲಾಗಿರುತ್ತದೆ.

2020ರ ಎಐಸಿಟಿಇ ಅಧಿಸೂಚನೆ . ಸಂಖ್ಯೆ:F.No.27-4/AICTE/RIFD/Pay Scale/2018-19 ದಿನಾಂಕ:20.05.2020 ರಲ್ಲಿ Clarifications on Certain Issues / Anomalies in 6th CPC pertaining to Qualifications, Pay Scales, Service Conditions, Career Advancement Schemes (CAS)/promotions etc. for Teachers and other Academic Staff of Technical Institutions (Degree/Diploma)ರಲ್ಲಿ ನೀಡಿದ ಸ್ಪಷ್ಟೀಕರಣಗಳನ್ನು ಆಧರಿಸಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 20 ಡಿಟಿಇ 2018, ದಿನಾಂಕ:08.12.2020 ಮತ್ತು ಇಡಿ 167 ಡಿಟಿಇ 2017, ದಿನಾಂಕ:10.11.2020ರಲ್ಲಿ, ವೃತ್ತಿ ಪದೋನ್ನತಿಗೆ ಸಂಬಂಧಿಸಿದ ಎ.ಪಿ.ಐ. ಆಧಾರಿತ ಪದ್ಧತಿಯಿಂದ ದಿನಾಂಕ:07.11.2015ರವರೆಗೆ ವಿನಾಯಿತಿ ನೀಡಲಾಗಿದ್ದು, ಎಐಸಿಟಿಇ ಕಾಲಕಾಲಕ್ಕೆ ನೀಡಲಾಗಿರುವ ವೃತ್ತಿ ಪದೋನ್ನತಿಗೆ ಸಂಬಂಧಿಸಿದ ಮಾನದಂಡಗಳು ಹಾಗೂ ಇತರೆ ಮಾನದಂಡಗಳ ಕುರಿತು ಷರತ್ತುಗಳೊಂದಿಗೆ ಮಾರ್ಗಸೂಚಿಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಆದೇಶಿಸಲಾಗಿರುತ್ತದೆ.

ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ:ಇಡಿ 186 ಡಿಟಿಇ 2020, ದಿನಾಂಕ:30.09.2021ರ ಪತ್ರದಲ್ಲಿ ವೃತ್ತಿ ಪದೋನ್ನತಿ ನೀಡುವ ಸಂಬಂಧ ಪ್ರತ್ಯೇಕ ಸ್ಕ್ರೀನಿಂಗ್ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ಪ್ರತ್ಯಾಯೋಜಿಸಲಾಗಿರುತ್ತದೆ. ಅದರಂತೆ, ಆಯುಕ್ತಾಲಯದ ಕಛೇರಿ ಆದೇಶ ಸಂಖ್ಯೆ: ADMIO/EST10/02/2021, ದಿನಾಂಕ:09.05.2022 ಮತ್ತು ಸಂಖ್ಯೆ:ADMIN0/EST/10/30/2022, ದಿನಾಂಕ:27.06.2022 ಗಳನ್ವಯ ಸರ್ಕಾರಿ ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಅಧ್ಯಾಪಕರುಗಳಿಗೆ ವೃತಿ ಪದೋನ್ನತಿ ನೀಡುವ ಕುರಿತು ಪರಿಶೀಲಿಸುವ ಸಲುವಾಗಿ ವಿಷಯ ತಜ್ಞರುಗಳನ್ನೊಂಡ ಸ್ಕ್ರೀನಿಂಗ್ ಸಮಿತಿಯನ್ನು ಆಯುಕ್ತಾಲಯದಿಂದ ರಚಿಸಲಾಗಿರುತ್ತದೆ.

ಮುಂದುವರೆದು, ಎಐಸಿಟಿಇ ರವರ ಸ್ಪಷ್ಟೀಕರಣ ಪತ್ರ ಸಂ: FNo:P&AP/PAY/ 01/2021-22/68 DATED: 02.08.2022 ರಲ್ಲಿ ಅಲ್ಪಾವಧಿ ತರಬೇತಿ, ಪತ್ರಿಕಾ ಪ್ರಕಟಣೆ, ಮತ್ತು ಇತರೆ ವಿಷಯಗಳ ಕುರಿತು ಸ್ಪಷ್ಟೀಕರಿಸಲಾದ ಪ್ರಯುಕ್ತ ಸದರಿ ಸ್ಪಷ್ಟೀಕರಿಸಲಾದ ಅಂಶಗಳನ್ವಯ ಅರ್ಹತೆಯನ್ನು ಪರಿಶೀಲಿಸಿ, ಕ್ರಮಕೈಗೊಳ್ಳಲಾಗುತ್ತಿದೆ.

ಎಐಸಿಟಿಇ ಕಾಲಕಾಲಕ್ಕೆ ಹೊರಡಿಸಿರುವ ಅಧಿಸೂಚನೆ/ನಿಯಮಾವಳಿ/ಆದೇಶ/ ಸ್ಪಷ್ಟೀಕರಣಗಳನ್ನು ಅಳವಡಿಸಿಕೊಂಡು ಸಿ.ಎ.ಎಸ್ ವೃತ್ತಿ ಪದೋನ್ನತಿಯನ್ನು ನೀಡಲು ದಿನಾಂಕ:07.11.2015ರ ಪೂರ್ವಕ್ಕೆ ಅರ್ಹರಿರುವ ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಬೋಧಕ ವರ್ಗದವರಿಗೆ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಬೋಧಕ ವರ್ಗದವರಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯ ಜಾರಿ ದಿನಾಂಕ:01.03.2019ಕ್ಕೆ ಮುಂಚಿನ ಅವಧಿಗೆ ಸಂಬಂಧಿಸಿದ ವೃತ್ತಿ ಪದೋನ್ನತಿ ಪ್ರಸ್ತಾವನೆಗಳನ್ನು ಸ್ಕ್ರೀನಿಂಗ್ ಸಮಿತಿಯ ಮುಂದೆ ಮಂಡಿಸಿ, ವಿಷಯ ತಜ್ಞರ ಶಿಫಾರಸ್ಸಿನ ಮೇರೆಗೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದ್ದು, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಮುಂದುವರೆದು, ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಸಿ.ಎ.ಎಸ್. ಪದೋನ್ನತಿಗೆ ಸಂಬಂಧಿಸಿದ ಉಳಿಕೆ ಪ್ರಸ್ತಾವನೆಗಳು ಆಯುಕ್ತಾಲಯದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಸದರಿ ಪ್ರಸ್ತಾವನೆಗಳನ್ನು ಸ್ಕ್ರೀನಿಂಗ್ ಸಮಿತಿಯ ಶಿಫಾರಸ್ಸಿನೊಂದಿಗೆ ಆಯುಕ್ತಾಲಯದಿಂದ ಸರ್ಕಾರಕ್ಕೆ ಸಲ್ಲಿಸಿದ ಕೂಡಲೇ ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಇಡಿ 343 ಡಿಸಿಇ 2022

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ, ಐ.ಟಿ.-ಬಿ.ಟಿ. ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು